ಮೇಲೆ ಹೂ ತಪ್ಪಿದರೂ ಪರವಾಗಿಲ್ಲ. ಯಮನೂರಪ್ಪನಿಗೆ ಹೂ ಕೊಡುವುದು ತಪ್ಪಿಸಲಿಲ್ಲ. ಯಮನೂರಪ್ಪ ಕೂಸಿದ್ದಾಗ ಅದೇನನ್ನು ಕನಸು ಕಾಣುತ್ತಿದ್ದನೋ. ಆ ಮಲ್ಲಿಗೆ ಹಿಡಿದುಕೊಂಡು ನಿದ್ದೆಗೆ ಜಾರಿದಾಗ ಅವನ ತುಟಿಯಲ್ಲಿ ಮಂದಸ್ಮಿತ ಅರಳುತ್ತಿತ್ತಂತೆ. ಇವನಿಗೆ ದಿನಾ ಮಲ್ಲಿಗೆ ಹೂ ಬೇಕಾದ್ದರಿಂದ ಪಾರಮ್ಮ ಹಿತ್ತಲಿನಲ್ಲಿ ಮಲ್ಲಿಗೆ ಗಿಡ ತಂದು ಹಚ್ಚಿದಳು. ಆ ಗಿಡಕ್ಕೆ ಮಗನಿಗೆ ತೋರುತ್ತಿದ್ದ ಅಕ್ಕರೆಯಷ್ಟೇ ಕಾಳಜಿ ಮಾಡಿದಳು. ಅದೂ ಹುಲುಸಾಗಿಯೇ ಬೆಳೆಯಿತು. ಹೂ ಬಿಟ್ಟಿತು. ಆ ಗಿಡದ ಹೂವನ್ನು ಪೋಣಿಸಿ ಯಮನೂರಪ್ಪನ ಮುಂಗೈಗೆ ನಿತ್ಯ ಕಟ್ಟುತ್ತಿದ್ದಳು. ಅಂವ ಅಳು ಮರೆತ. ಆದರೆ, ದೊಡ್ಡವನಾದರೂ ಮಲ್ಲಿಗೆ ಹೂ ಮರೆಯಲಿಲ್ಲ.

★★★

ಯಮನೂರಪ್ಪ ಹುಬ್ಬಳ್ಳಿ ಬಿಟ್ಟು ನವಲಗುಂದದಲ್ಲೇ ಕೋರಿಯರ್ ಏಜೆನ್ಸಿ ಪಡೆದು ಕೆಲಸ ಆರಂಭಿಸಿದ. ಒಂದು ದಿನ ಮೂವರೂ ಯಮನೂರಿಗೆ ಹುಡುಗಿ ನೋಡಲು ಹೊರಟರು. ಕನ್ಯೆ ನೋಡಲು ಮೂವರು ಆಗಬಾರದೆಂದು ಪಾರಮ್ಮ ಬಾಜು ಮನೆಯ ಸಾವಂತ್ರೆಮ್ಮನನ್ನು ಕರೆದೊಯ್ದಳು. ಯಮನೂರಪ್ಪನೊಳಗೆ ಒಂದು ವಿಚಿತ್ರ ಉಮೇದಿ ಲಾಸ್ಯವಾಡತೊಡಗಿತ್ತು. ಪಾರಮ್ಮ ಇಲಕಲ್ ಸೀರೆ, ಹೊಸ ಕುಪ್ಪಸ ಧರಿಸಿದ್ದರೆ, ಬಸಪ್ಪ ಹೊಸ ಧೋತರ, ನೆಹರು ಶರ್ಟ್ ತೊಟ್ಟಿದ್ದ. ಅವರಿಬ್ಬರಲ್ಲಿ ಸಡಗರ ಮನೆ ಮಾಡಿತ್ತು. ನೋಡ ನೋಡುತ್ತಲೇ ಬಸ್ ಯಮನೂರು ತಲುಪಿತು. ಅಲ್ಲೇ ಬಸ್‌ಸ್ಟ್ಯಾಂಡ್ ಹತ್ತಿರದ ಚಹಾದ ಅಂಗಡಿಯಲ್ಲಿ ಕನ್ಯೆ ನೋಡಲು ಹೊರಟ ಮನೆ ಯಾವ ಕಡೆಯೆಂದು ತಿಳಿದುಕೊಂಡು ಕನ್ಯೆಯ ಮನೆಗೆ ಬಂದರು. ಇವರು ಕಾಲು, ಮುಖ ತೊಳೆದುಕೊಂಡು ಕನ್ಯೆಯ ಮನೆಯೊಳಗೆ ಹೋದಾಗ ಒಗ್ಗರಣೆ ಪರಿಮಳ ಸೂಸತೊಡಗಿತ್ತು. ಇವರಿಗೆ ಕೊಡಲೆಂದು ಅವಲಕ್ಕಿಗೆ ಒಗ್ಗರಣೆ ಹಾಕಿರಬೇಕು. ಅವರು ಇವರು ಅದೂ ಇದೂ ಮಾತಾಡತೊಡಗಿದರು. ಕನ್ಯೆ ಕುಂದ್ರಿಸಲೊಂದು ಮಣೆ ಹಾಕಿದರು. ಯಮನೂರಪ್ಪ ಗೋಡೆಗೆ ಆತು ಕುಳಿತಿದ್ದ. ಮಣೆ ಮೇಲೆ ಕನ್ಯೆ ಕುಂದ್ರಿಸಿದರು. ಎಲ್ಲರೂ ನೋಡಿದರು. ಸಾವಂತ್ರೆಮ್ಮ ಆ ಹುಡುಗಿಗೆ, 'ನಿನ್ನ ಹೆಸರೇನವ' ಎಂದು ಕೇಳಿದಳು. ಆ ಹುಡುಗಿ ನಾಚುತ್ತ, 'ಶಾಂತಾ' ಎಂದು ಉಲಿದಳು. ಶಾಂತಾಳ ಮನೆಯಲ್ಲಿ ಯಾರ್‍ಯಾರಿದ್ದಾರೆ, ಮನೆ ದೇವ್ರು ಯಾವುದು... ಹೀಗೆ ಸಕಲೆಂಟು ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡರು. ಯಮನೂರಪ್ಪ ಕಣ್ಣೆತ್ತಿ ನೋಡಿದ. ಹುಡುಗಿ ಲಕ್ಷಣವಾಗಿದ್ದಾಳೆ ಅನಿಸಿತು. ಸಾವೆಂತ್ರೆಮ್ಮ, 'ಸಾಕು ಎಬ್ಬಿಸ್ರಿ...' ಎಂದಳು. ಶಾಂತಾ ಒಳಹೋದಳು. ಹೋಗುವಾಗ ಅವಳು ಮುಡಿದಿದ್ದ ಮಲ್ಲಿಗೆಯ ದಂಡೆಯಲ್ಲಿಂದ ಒಂದೆರಡು ಹೂಗಳು ಉದುರಿದವು. ಯಮನೂರಪ್ಪ ಆ ಹೂಗಳನ್ನು ಎತ್ತಿಕೊಂಡ. ಎಲ್ಲರಿಗೂ ಅವಲಕ್ಕಿ ಕೊಟ್ಟರು. ಯಮನೂರಪ್ಪ ಅವಲಕ್ಕಿ ತಿನ್ನುತ್ತಾ ಮಲ್ಲಿಗೆ ಹೂಗಳನ್ನು ಮೂಗಿಗೆ ತಂದುಕೊಂಡು ಮೂಸಿದ. ಒಂದೆರಡು ತುತ್ತು ತಿಂದಿರಬೇಕಷ್ಟೆ. ಅವಲಕ್ಕಿ ತಿನ್ನುವುದನ್ನು ಬಿಟ್ಟು ಹೂ ಮೂಸುತ್ತ ಕನಸಿನ ಲೋಕಕ್ಕೆ ಜಾರಿದ. ಆ ಕಡೆ ಕುಳಿತಿದ್ದ ಪಾರಮ್ಮ ಇವನನ್ನು ನೋಡಿ ಗಲಿಬಿಲಿಗೊಂಡಳು. ಶಾಂತಾಳ ಅಪ್ಪ, ಅವ್ವ, ಅಣ್ಣ ಎಲ್ಲ ಯಮನೂರಪ್ಪನನ್ನು ಆತಂಕದ ಕಣ್ಣುಗಳಿಂದ ದಿಟ್ಟಿಸಿ ನೋಡತೊಡಗಿದರು. ಯಮನೂರಪ್ಪ ಕಣ್ಣು ಮುಚ್ಚಿ ಮಂದಸ್ಮಿತ ಬೀರತೊಡಗಿದ್ದ. ಶಾಂತಾಳ ಅಣ್ಣ, 'ಅವ್ರು ಹಿಂಗ್ಯಾಕ ಮಾಡ್ತಾರ್ರಿ. ಕುಂತು ಕುಂತಲ್ಲೇ ಕಣ್ಣು ಮುಚ್ಚಿ ಒಬ್ರಾ ನಗ್ತಾರ...' ಅಂದ. ಬಸಪ್ಪ ಯಮನೂರಪ್ಪನ ಮೈ ದಡವಿ ಎಬ್ಬಿಸಿದ. ಯಮನೂರಪ್ಪ ಕನಸಿನಿಂದ ಎದ್ದು ಗೊಂದಲಗೊಂಡ. ಎಲ್ಲರ ಮುಖದಲ್ಲಿನ ಆತಂಕ ಅಣಕಿಸಿದಂತಾಗಿ ಅವಮಾನ ಕಪಾಳಕ್ಕೆ ರಪ್ಪನೆ ಬೀಸಿದಂತಾಯ್ತು. ಕೈ ತೊಳೆದು ಎದ್ದು